# ಪ್ರಥಮದರ್ಜೆ ಸಹಾಯಕರ ಪರೀಕ್ಷೆ – 2013
## ಸಾಮಾನ್ಯ ಜ್ಞಾನ

1. ಪ್ರಮುಖವಾಗಿ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಗೆಲ್ಲುವ ಮೂಲಕ ಸೈನಾ ನೆಹ್ವಾಲ್ ಅವರು ಇಂತಹ ಗೆಲುವಿನ ಮೊಟ್ಟ ಮೊದಲ ಭಾರತೀಯ ಮಹಿಳೆಯಾಗಿ 2009ರ ಜೂನ್ 21ರಂದು ಇತಿಹಾಸ ನಿರ್ಮಿಸಿದರು. ಆ ಪಂದ್ಯಾವಳಿ ಯಾವುದು?
   1. ಚೈನಾ ಮಾಸ್ಟರ್ಸ್ ಸೂಪರ್ ಸೀರೀಸ್
   2. ಆಲ್ ಇಂಗ್ಲೆಂಡ್ ಸೂಪರ್ ಸೀರೀಸ್
   3. ಸಿಂಗಾಪುರ್ ಸೂಪರ್ ಸೀರೀಸ್
   4. ಇಂಡೋನೇಶಿಯನ್ ಓಪನ್ ಸೂಪರ್ ಸೀರೀಸ್
2. ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರು ಚುನಾಯಿತ ರಾಜ್ಯಸಭಾ ಸದಸ್ಯರಾಗಿದ್ದು ಅವರು ಯಾವ ರಾಜ್ಯದಿಂದ ಚುನಾಯಿತರಾಗಿದ್ದಾರೆ?
   1. ಪಂಜಾಬ್ 2. ಉತ್ತರ ಪ್ರದೇಶ
   3. ಅಸ್ಸಾಂ 4. ಹಿಮಾಚಲ ಪ್ರದೇಶ
3. ಮಣಿಪುರದ ಅಧಿಕೃತ ಭಾಷೆ ಯಾವುದು?
   1. ಮಣಿಪುರಿ 2. ಇಂಗ್ಲಿಷ್
   3. ಮೈತಿಲಾನ್ 4. ಹಿಂದಿ
4. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ (ನರೇಗಾ)ವನ್ನು ಮೊತ್ತ ಮೊದಲಿಗೆ ಜಾರಿಗೆ ತಂದ ಸಮ್ಮಿಶ್ರ ಸರ್ಕಾರ ಯಾವುದು?
   1. ದಿ ನ್ಯಾಶನಲ್ ಫ್ರಂಟ್ 1989–1900
   2. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಎನ್‌ಡಿಎ) 1999–2004
   3. ಯುನೈಟೆಡ್ ಪ್ರೊಗ್ರೆಸಿವ್ ಮೈತ್ರಿಕೂಟ (ಯುಪಿಎ)–2004 – 2009
   4. ಯುನೈಟೆಡ್ ಪ್ರೊಗ್ರೆಸಿವ್ ಮೈತ್ರಿಕೂಟ (ಯುಪಿಎ)– 2009
5. ಇವುಗಳಲ್ಲಿ ಯಾವುದು ತಪ್ಪು ಹೊಂದಾಣಿಕೆ ಎಂಬುದನ್ನು ಗುರುತಿಸಿ.
   1. ಮೀನಾಕ್ಷಿ ಮಧುರೈ
   2. ವಿಶ್ವನಾಥ ಕಾಶಿ
   3. ಜಗನ್ನಾಥ ಪುರಿ
   4. ವಿಠೋಬಾ ಪುಣೆ
6. ದಕ್ಷಿಣ ಏಷಿಯಾದ ಈ ಕೆಳಕಂಡ ದೇಶ/ ದೇಶಗಳಲ್ಲಿ ಚುನಾಯಿತರಾದ ಮಹಿಳೆಯರು ಜನಪ್ರಿಯರಾಗಿ ಸರ್ಕಾರದ ನೇತೃತ್ವವಹಿಸಿದ್ದರು.

   ಎ. ಭಾರತ ಬಿ. ಶ್ರೀಲಂಕಾ

   ಸಿ. ಬಾಂಗ್ಲಾದೇಶ ಡಿ. ಪಾಕಿಸ್ತಾನ

   ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿ ಉತ್ತರವನ್ನು ಆಯ್ಕೆ ಮಾಡಿ.
   1. ಎ, ಬಿ,ಸಿ ಮತ್ತು ಡಿ ಸರಿಯಾಗಿದೆ
   2. ಎ, ಬಿ ಮತ್ತು ಸಿ ಸರಿಯಾಗಿವೆ
   3. ಎ ಮತ್ತು ಬಿ ಸರಿಯಾಗಿವೆ
   4. ಎ ಮಾತ್ರ ಸರಿ ಇದೆ
7. ಇವುಗಳಲ್ಲಿ ಯಾವುದು ತಪ್ಪು ಹೊಂದಾಣಿಕೆ ಎಂಬುದನ್ನು ಗುರುತಿಸಿ.

   ನದಿ ದೇಶ
   1. ಯಾಂಗ್‌ತ್ಸೆ ಚೀನಾ
   2. ವೋಲ್ಗಾ ರಷ್ಯಾ
   3. ಡ್ಯಾನ್ಯೂಬ್ ಸ್ವಿಟ್‌ಜರ್‌ಲ್ಯಾಂಡ್
   4. ಯುಫ್ರೆಟಿಸ್ ಟರ್ಕಿ
8. ಭಾರತದಲ್ಲಿ ಮುಸ್ಲಿಮರ ಅಭಿವೃದ್ಧಿಯ ಸಾಪೇಕ್ಷ ಸ್ಥಿತಿ ಕುರಿತಂತೆ ತನಿಖೆ ನಡೆಸಿದ ಆಯೋಗ / ಸಮಿತಿ ಯಾವುದು?
   1. ಜಸ್ಟೀಸ್ ರಂಗನಾಥ ಮಿಶ್ರ
   2. ಜಸ್ಟೀಸ್ ರಾಜೇಂದ್ರ ಸಾಚಾರ್
   3. ಜಸ್ಟೀಸ್ ಚಿನ್ನಪ್ಪ ರೆಡ್ಡಿ
   4. ಜಸ್ಟೀಸ್ ಸೋಮಶೇಖರ್
9. 2011ರ ಹುಲಿಗಳ ಸಂಖ್ಯಾಗಣತಿಯ ಪ್ರಕಾರ ಹುಲಿಗಳ ಸಂಖ್ಯೆ ಅತ್ಯಂತ ಹೆಚ್ಚಾಗಿರುವ ರಾಜ್ಯ ಯಾವುದು?
   1. ಗುಜರಾತ್ 2. ಪಶ್ಚಿಮ ಬಂಗಾಳ

3. ಕರ್ನಾಟಕ 4. ಮಧ್ಯಪ್ರದೇಶ

10. 1 ಮತ್ತು 2 ಸರಿ ಹೊಂದಿಸಿ ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿ ಉತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ – 1 | ಪಟ್ಟಿ – 2 |
|---|---|
| **ಲೇಖಕರು** | **ಕೃತಿಗಳು** |
| ಎ. ಸಲ್ಮಾನ್ ರಶ್ದಿ | ದಿ ಗಾಡ್ ಆಫ್ ಸ್ಮಾಲ್ ಥಿಂಗ್ಸ್ |
| ಬಿ. ವಿಕ್ರಮ್ ಸೇಠ್ | ದಿ ವೈಟ್ ಟೈಗರ್ |
| ಸಿ. ಅರವಿಂದ ಅಡಿಗ | ಎ ಸೂಟಬಲ್ ಬಾಯ್ |
| ಡಿ. ಅರುಂಧತಿ ರಾಯ್ | ಸಟಾನಿಕ್ ವರ್ಸಸ್ |

| | ಎ | ಬಿ | ಸಿ | ಡಿ |
|---|---|---|---|---|
| 1. | 4 | 3 | 2 | 1 |
| 2. | 2 | 3 | 1 | 4 |
| 3. | 3 | 4 | 2 | 1 |
| 4. | 1 | 2 | 3 | 4 |

11. ರಾಷ್ಟ್ರೀಯ ತನಿಖಾ ಏಜೆನ್ಸಿಯ ಇತ್ತೀಚಿನ ವರದಿಯ ಪ್ರಕಾರ ಪಾಕಿಸ್ತಾನದ ಉಗ್ರಗಾಮಿ ಸಂಘಟನೆ ಲಷ್ಕರ್-ಇ-ತೊಯ್ಬಾ ಯಾವ ಪ್ರದೇಶದ ಯುವಕರನ್ನು ಸೇರ್ಪಡೆ ಮಾಡಿಕೊಳ್ಳುತ್ತಿದೆ?

1. ಪಶ್ಚಿಮ ಬಂಗಾಳ 2. ಆಂಧ್ರಪ್ರದೇಶ

3. ಉತ್ತರ ಪ್ರದೇಶ 4. ಕೇರಳ

12. ಅತ್ಯಂತ ಕಡಿಮೆ ಭ್ರಷ್ಟಾಚಾರ ಇರುವಂಥ ದೇಶ

1. ಫಿನ್ಲೆಂಡ್ 2. ನ್ಯೂಜಿಲೆಂಡ್

3. ಸಿಂಗಾಪೂರ್ 4. ಡೆನ್ಮಾರ್ಕ್

13. ವಿಶ್ವ ನಂ. 2ರ ಸ್ಥಾನವನ್ನು ಗಳಿಸುವುದಕ್ಕಾಗಿ ಫೆಡರರ್‌ನನ್ನು ಸೋಲಿಸಿದ ಆಟಗಾರ ಯಾರು?

1. ರಾಬಿನ್ ಸೊಡರ್ಲಿಂಗ್ 2. ರೊಲ್ಯಾಂಡ್ ಗ್ಯಾರೋಸ್

3. ನೆವೋಕ್ ಜೊಕೊವಿಕ್ 4. ಡೇವಿಡ್ ಫೆರರ್

14. 2011ರ ವಿಶ್ವಕಪ್ ಕ್ರಿಕೆಟ್‌ನಲ್ಲಿ ಯುವರಾಜ್ ಸಿಂಗ್ ಅವರು ಎಷ್ಟು ಸಲ ಪಂದ್ಯ ಶ್ರೇಷ್ಠನಾಗಿ ಘೋಷಿಸಲ್ಪಟ್ಟರು?

1. 2 2. 4 3. 3 4. 1

15. ಇತ್ತೀಚೆಗೆ ಕೊಲೆಯಾದ ಪಾಕಿಸ್ತಾನದ ಏಕೈಕ ಕ್ರಿಶ್ಚಿಯನ್ ಸಂಪುಟ ಸಚಿವರ ಹೆಸರೇನು?

1. ಶಹಬಾಜ್ ಭಟ್ಟಿ 2. ತಾಸೀರ್ ಭಟ್ಟಿ

3. ಅಸಿಯಾ ಬೀಬಿ 4. ಜಫಾರ್ ಮಾಸೀಹ್

16. ವಿನಾಶಕಾರಿ ಸುನಾಮಿಯು ಜಪಾನಿನ ಮೇಲೆ ಅಪ್ಪಳಿಸಿದ ದಿನಾಂಕ

1. ಮಾರ್ಚ್ 9 2. ಮಾರ್ಚ್ 11

3. ಮಾರ್ಚ್ 13 4. ಮಾರ್ಚ್ 15

17. ಕೇಂದ್ರ ಸರ್ಕಾರದ ಸಂಪುಟ ಕಾರ್ಯದರ್ಶಿ ಯಾರು?

1. ಚಂದ್ರಶೇಖರ್ 2. ಶ್ಯಾಮಲಾಲ್ ಯಾದವ್

3. ಅನಂತ್ 4. ಸಂಜೀವ ಬಜಾಜ್

18. ವಿಶ್ವ ನೀರಿನ ದಿನ ಎಂದು ಆಚರಿಸಲಾಗುವ ದಿನಾಂಕ

1. ಮಾರ್ಚ್ 23 2. ಮಾರ್ಚ್ 26

3. ಮಾರ್ಚ್ 22 4. ಮಾರ್ಚ್ 19

19. ಇತ್ತೀಚೆಗೆ ಕ್ಯಾನ್ಸರ್‌ನಿಂದ ನಿಧನರಾದ ಹಾಲಿವುಡ್‌ನ ಜನಪ್ರಿಯ ತಾರಾಮಣಿ

1. ಸೋಫಿಯಾ ಲಾರೆನ್ 2. ಮರ್ಲಿನ್ ಮನ್ರೊ

3. ಎಲಿಜಬೆತ್ ಟೇಲರ್ 4. ಮೇರಿ ಡಗ್ಲಾಸ್

20. ವಿಕಿಲೀಕ್ಸ್‌ನ ಪ್ರಧಾನ ಸಂಪಾದಕರ ಹೆಸರು

1. ಜೂಲಿಯನ್ ಅಸ್ಸಾಂಜೆ 2. ಬಾಬಾ ಹ್ಯಾಂಕ್ಸ್

3. ಕ್ರಿಸ್ಟೋಫರ್ ಲೀ 4. ಡೇವ್ ಬಾರ್ಬರ್

21. ಕರ್ನಾಟಕ ಸರ್ಕಾರವು ಮಲೆನಾಡು ಪ್ರದೇಶದಲ್ಲಿ ಕೆಳಕಂಡ ಬೆಳೆ ನೆಡುವಿಕೆಯನ್ನು ಇತ್ತೀಚೆಗೆ ನಿಷೇಧಿಸಿದೆ

1. ತೇಗ 2. ಹುಣಸೆ

3. ನೀಲಗಿರಿ 4. ಸೀಗೆಕಾಯಿ

22. 2ಜಿ ಹಗರಣ ಯಾವುದಕ್ಕೆ ಸಂಬಂಧಿಸಿದೆ?

1. ಕ್ರಿಕೆಟ್ 2. ರಿಯಲ್ ಎಸ್ಟೇಟ್

3. ದೂರ ಸಂಪರ್ಕ 4. ಅಕ್ರಮ ಹಣದ ವರ್ಗಾವಣೆ

23. ಈ ಕೆಳಕಂಡ ಕೇಂದ್ರೀಯ ಜಾಗೃತ ಆಯುಕ್ತರ ನೇಮಕಾತಿಯು ವಿವಾದವನ್ನೆಬ್ಬಿಸಿದೆ.

1. ಪಿ.ಜೆ. ಥಾಮಸ್ 2. ಪಿ.ಕೆ. ಕಲ್ಮಾಡಿಯಾ

3. ಕೆ.ಆರ್. ಮ್ಯಾಥ್ಯೂ 4. ಪಿ.ಡಿ. ದಿನಕರನ್

24. ಇತ್ತೀಚೆಗೆ ಸುದ್ದಿಯಲ್ಲಿರುವ ಲಿಬಿಯಾದ ಅಧ್ಯಕ್ಷರ ಹೆಸರು

1. ಹೋಸ್ನಿ ಮುಬಾರಕ್ 2. ಮಹಮ್ಮದ್ ಗಡಾಫಿ

3. ಅಬ್ದುಲ್ಲಾ ಸಾಲೇಹ್ 4. ಹುಸೇನ್ ಅಲಿ

25. ಅರುಣಾ ಶಾನುಭಾಗ್ ಪ್ರಕರಣ ಯಾವುದಕ್ಕೆ ಸಂಬಂಧಿಸಿದೆ?

1. ವರದಕ್ಷಿಣೆ ಸಾವು 2. ಸುಖ ಮರಣ

3. ಗಡೀಪಾರು ಮಾಡುವಿಕೆ 4. ಮಾನನಷ್ಟ ಪ್ರಕರಣ

26. ಅರಬ್ ಒಕ್ಕೂಟದ ಪ್ರಧಾನ ಕಚೇರಿ ಇರುವ ಸ್ಥಳ

1. ಕೈರೋ 2. ಇಸ್ತಾನ್‌ಬುಲ್

3. ಟ್ರಿಪೋಲಿ 4. ಬೈರೂಟ್

27. ಕರ್ನಾಟಕದಿಂದ ರಾಜ್ಯಸಭೆಗೆ ಇತ್ತೀಚೆಗೆ ಆಯ್ಕೆಯಾದ ಸಿನಿಮಾ ತಾರೆ

1. ರೇಖಾ 2. ಹೇಮಮಾಲಿನಿ

3. ಪಾರ್ವತಿ ಮೆನನ್ 4. ರಮ್ಯಾ

28. ಭಾರತದ ಮೊದಲಯುದ್ಧ ವಿಮಾನದ ಹೆಸರು

1. ವೈಜಯಂತ 2. ಲಿಜಾಸ್

3. ಅರ್ಜುನ್ 4. ತೇಜಸ್

29. ಭಾರತ ವಿದೇಶಾಂಗ ಕಾರ್ಯದರ್ಶಿಯ ಹೆಸರು

1. ಎಂ.ಕೆ. ನಾರಾಯಣನ್ 2. ನಾರಾಯಣ ರಾವ್

3. ನಿರುಪಮಾ ರಾವ್ 4. ಜಿ.ಕೆ. ಪಿಳ್ಳೆ

30. ಬ್ರಹ್ಮೋಸ್ ಎಂಬ ಧ್ವನ್ಯಾತೀತ ಕಾವಲು ಕ್ಷಿಪಣಿಯು ಈ ಕೆಳಕಂಡ ಎರಡು ದೇಶಗಳ ನಡುವಿನ ಜಂಟಿ ಸಹಯೋಗದ ಪ್ರಯತ್ನ ಫಲವಾಗಿ ರೂಪುಗೊಂಡಿದೆ.

1. ಭಾರತ ಮತ್ತು ರಷ್ಯಾ
2. ಭಾರತ ಮತ್ತು ಸಂಯುಕ್ತ ಸಂಸ್ಥಾನ
3. ಭಾರತ ಮತ್ತು ಫ್ರಾನ್ಸ್
4. ಭಾರತ ಮತ್ತು ರುಮೇನಿಯಾ

31. ಜಪಾನಿನಲ್ಲಿ ಇತ್ತೀಚೆಗೆ ಸಂಭವಿಸಿದ ಭೂಕಂಪ ಹಾಗೂ ಸುನಾಮಿಯಿಂದ ತೀವ್ರವಾಗಿ ಹಾನಿಗೀಡಾದ ನ್ಯೂಕ್ಲಿಯರ್ ರಿಯಾಕ್ಟರ್

1. ಕಶಿವಾಜಾಕಿ ಕರಿವಾ ನ್ಯೂಕ್ಲಿಯರ್ ಸ್ಥಾವರ
2. ಫುಕುಶಿಮಾ ಡಯಿಚಿ ನ್ಯೂಕ್ಲಿಯರ್ ಸ್ಥಾವರ
3. ಹಿಗಾಶಿ ಡೋರಿ ನ್ಯೂಕ್ಲಿಯರ್ ಸ್ಥಾವರ
4. ಹಾಮವೋಕಾ ನ್ಯೂಕ್ಲಿಯರ್ ಸ್ಥಾವರ

32. ಪರಿಶುದ್ಧವಾದ ಚಿನ್ನವು (24 ಕ್ಯಾರೆಟ್) ಆಭರಣಗಳ ತಯಾರಿಕೆಗೆ ಯಾಕೆ ಸೂಕ್ತವಲ್ಲ?

1. ಪರಿಶುದ್ಧವಾದ ಚಿನ್ನವು ಬಹಳವಾಗಿ ಹೊಳೆಯುವುದಿಲ್ಲ
2. ಪರಿಶುದ್ಧವಾದ ಚಿನ್ನವು ಆಭರಣಗಳ ತಯಾರಿಕೆಗೆ ತೀರಾ ಮೆದುವಾಗಿರುವುದರಿಂದ
3. ಅದರ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುವುದು ಅತ್ಯಂತ ಕಷ್ಟಕರ
4. ಬಹಳ ವಿರಳವಾದ ಪರಿಶುದ್ಧ ಚಿನ್ನ ಲಭ್ಯವಾಗುತ್ತದೆ

33. ಬಹ್ರೇನ್‌ನಲ್ಲಿರುವ ಬಹುಸಂಖ್ಯಾತ ಜನರು ಕೆಳಕಂಡ ಪಂಗಡದವರು

1. ಶಿಯಾಗಳು 2. ಅಹ್ಮದೀಯರು

3. ಸುನ್ನಿಗಳು 4. ಪಾರ್ಸಿಗಳು

34. ಅಫಘಾನಿಸ್ತಾನದ ಅಧ್ಯಕ್ಷರ ಹೆಸರು

1. ಮೊಹಮದ್ ಉಸ್ಮಾನ್ ಕರ್ಜಾಯಿ
2. ಹಮೀದ್ ಕರ್ಜಾಯಿ
3. ಹಮೀದ್ ಕಫಿಉಲ್ಲಾ
4. ಮೊಹಮದ್ ಭಟ್

35. ಈ ಕೆಳಕಂಡ ವಿಷಯಕ್ಕೆ ಸಂಬಂಧಿಸಿದ ವಿವಿಧ ಶಿಫಾರಸ್ಸುಗಳನ್ನು / ಆಯ್ಕೆಗಳನ್ನು ರೂಪಿಸುವುದಕ್ಕಾಗಿ ಸರ್ವೋಚ್ಚ ನ್ಯಾಯಾಲಯದ ಮಾಜಿ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಅವರ ನೇತೃತ್ವದ ಸಮಿತಿಯನ್ನು ರಚಿಸಲಾಗಿತ್ತು.

1. ಬೋಡೋಲ್ಯಾಂಡ್ ವಿವಾದ
2. ಮಿಜೋ ವಿವಾದ
3. ಗೂರ್ಖಾಲ್ಯಾಂಡ್ ವಿವಾದ
4. ತೆಲಂಗಾಣ ವಿವಾದ

36. 'ಗಾಡ್ಸ್ ' ಓನ್ ಕಂಟ್ರಿ ಎಂಬ ನುಡಿಗಟ್ಟನ್ನು ಭಾರತದ ಯಾವ ರಾಜ್ಯಕ್ಕೆ ಸಂಬಂಧಿಸಿದಂತೆ ಆಗಾಗ್ಗೆ ಬಳಸಲಾಗುತ್ತದೆ?

1. ಗೋವಾ 2. ಹಿಮಾಚಲ ಪ್ರದೇಶ

3. ಕರ್ನಾಟಕ 4. ಕೇರಳ

37. ಭೂಕಂಪನದ ತೀವ್ರತೆಯನ್ನು ಯಾವುದರಿಂದ ಅಳೆಯುತ್ತಾರೆ?

1. ಸಿಸ್ಮೋಗ್ರಾಫ್ 3. ಸಿಸ್ಮೋಗ್ರಾಮ್

3. ಬಾರೋಮೀಟರ್ 4. ಹೈಡ್ರೋಮೀಟರ್

38. ಭೂಮಿಯ ಸುತ್ತ ವೃತ್ತಾಕಾರದ ಕಕ್ಷೆಯಲ್ಲಿ ಒಂದು ಉಪಗ್ರಹವು ಕಕ್ಷೆಯಲ್ಲಿದೆ. ರಿಮೋಟ್ ಕಂಟ್ರೋಲ್‌ನಿಂದಅದನ್ನು ಕಡಿಮೆ ತ್ರಿಜ್ಯದ ಕಕ್ಷೆಗೆ ತೆಗೆದುಕೊಂಡು ಬಂದಾಗ

1. ಉಪಗ್ರಹದ ಮೇಲಿನ ಗುರುತ್ವಾಕರ್ಷಣ ಬಲ ಹಾಗೂ ಅದರ ವೇಗ ಹೆಚ್ಚಾಗುತ್ತದೆ
2. ಉಪಗ್ರಹದ ಮೇಲಿನ ಗುರುತ್ವಾಕರ್ಷರ್ಣಣ ಬಲ ಹೆಚ್ಚಾಗುತ್ತದೆ ಆದರೆ ಅದರ ವೇಗ ಕಡಿಮೆಯಾಗುತ್ತದೆ
3. ಉಪಗ್ರಹದ ಮೇಲಿನ ಗುರುತ್ವಾಕರ್ಷಣ ಬಲ ಕಡಿಮೆಯಾಗುತ್ತದೆ ಆದರೆ ಅದರ ವೇಗ ಹೆಚ್ಚಾಗುತ್ತದೆ
4. ಉಪಗ್ರಹದ ಮೇಲಿನ ಗುರುತ್ವಾಕರ್ಷಣ ಬಲ ಹಾಗೂ ಅದರ ವೇಗ ಕಡಿಮೆಯಾಗುತ್ತದೆ

39. ಜೆಟ್ ಇಂಜಿನ್ ಯಾವ ತತ್ವದ ಮೇಲೆ ಕೆಲಸ ಮಾಡುತ್ತದೆ?

1. ಐನ್‌ಸ್ಟಿನ್‌ನ ಸಂಬಂಧ $E = mc^2$

2. ದ್ರವ್ಯರಾಶಿಯ ಸಂರಕ್ಷಣೆ

3. ಶಕ್ತಿಯ ಸಂರಕ್ಷಣೆ

4. ರೇಖೀಯ ಸಂವೇಗದ ಸಂರಕ್ಷಣೆ

40. ಬಣ್ಣ ಹಚ್ಚುವ ಬ್ರಶ್‌ನ ಬಿರುಕೂದಲುಗಳು ನೀರಿನಲ್ಲಿಟ್ಟಾಗ ಬಿಡಿಬಿಡಿಯಾಗಿರುತ್ತವೆ ಆದರೆ ನೀರಿನಿಂದ ಹೊರತೆಗೆದಾಗ ಒಂದಕ್ಕೊಂದು ಅಂಟಿಕೊಳ್ಳುತ್ತವೆ. ಇದಕ್ಕೆ ಕಾರಣ

1. ನೀರಿನ ಸ್ನಿಗ್ಧತೆ

2. ಬಣ್ಣದ ಅಂಟುವಿಕೆ ಸ್ವಭಾವ

3. ಬಿರುಗೂದಲುಗಳ ನಡುವಿನ ಅಂಟುಬಲಗಳು

4. ಮೇಲ್ಮೈ ಕರ್ಷಣ

41. ಈ ಕೆಳಗಿನ ಯಾವುದು ಡೋಪ್ಲರ್ ಪರಿಣಾಮಕ್ಕೆ ಉದಾಹರಣೆ

1. ಶಬ್ದದ ಆಕರವೊಂದು ಕೇಳುಗನಿಂದ ದೂರವಾಗುತ್ತ ಹೋದಂತೆ ಪಿಚ್‌ನಲ್ಲಿ ಹಠಾತ್ ಅಧಿಕ್ಯತೆ

2. ಶಬ್ದದ ಆಕರದಿಂದ ಕೇಳುಗನು ದೂರವಾಗುತ್ತ ಹೋದಂತೆ ಪಿಚ್‌ನಲ್ಲಿ ಹಠಾತ್ ಅಧಿಕ್ಯತೆ

3. ಚಲಿಸುತ್ತಿರುವ ಶಬ್ದದ ಆಕರವು ಕೇಳುಗನ ಮುಂದೆ ಹಾದು ಹೋದಾಗ ಪಿಚ್‌ನಲ್ಲಿ ಹಠಾತ್ ಕುಸಿತ

4. ಶಬ್ದದ ಆಕರವು ಕೇಳುಗನಿಗೆ ಸಮೀಪವಾಗುತ್ತಿದ್ದಂತೆ ಪಿಚ್‌ನಲ್ಲಿ ಸತತ ಕುಸಿತ

42. ಆಕಾಶವು ನೀಲಿಯಾಗಿ ಕಾಣುವುದಕ್ಕೆ ಕಾರಣ

1. ವಾತಾವರಣವು ನೀಲಿಯ ಬೆಳಕನ್ನು ಹೆಚ್ಚಾಗಿ ಚೆದುರಿಸುತ್ತದೆ

2. ನೀಲಿ ಬೆಳಕಿನ ವೆಲಾಸಿಟಿಯು ಇತರ ಬಣ್ಣಗಳ ವೆಲಾಸಿಟಿಗಿಂತ ಅಧಿಕವಾಗಿರುವುದರಿಂದ ಅದು ನೋಡುಗರಿಗೆ ಎಲ್ಲಕ್ಕಿಂತ ಮೊದಲು ತಲುಪುತ್ತದೆ

3. ಸೂರ್ಯನಿಂದ ಬರುವ ನೀಲಿ ಬೆಳಕಿನ ತೀವ್ರತೆಯು ಅಧಿಕವಾಗಿರುತ್ತದೆ

4. ವಾತಾವರಣದಲ್ಲಿ ನೀಲಿ ಬಣ್ಣದ ಬೆಳಕು ಅತ್ಯಂತ ಕಡಿಮೆ ಹೀರಲ್ಪಡುತ್ತದೆ

43. ಬ್ಲಾಟಿಂಗ್ ಕಾಗದವು ಶಾಯಿಯನ್ನು ಹೇಗೆ ಹೀರಿಕೊಳಳುತ್ತದೆ?

1. ಅಧಿಶೋಷಣೆಯ ಮೂಲಕ

2. ಕೆಪಿಲರಿ ಕ್ರಿಯೆಯ ಮೂಲಕ

3. ಕಾಗದ ಮತ್ತು ಶಾಯಿಯ ರಾಸಾಯನಿಕ ಪ್ರಕ್ರಿಯೆಯಿಂದ

4. ಅಯಾನೀಕರಣದ ಮೂಲಕ

44. ಸೋಪಿನ ಗುಳ್ಳೆಯು ಬಣ್ಣ ಬಣ್ಣವಾಗಿ ಕಾಣಿಸುತ್ತದೆ. ಇದಕ್ಕೆ ಕಾರಣ

1. ಚೆದುರಿಕೆ  2. ವ್ಯತಿಕರಣ

3. ಪ್ರತಿಫಲನ  4. ವಕ್ರೀಭವನ

45. ಹಾಲು ಮೊಸರಾಗುವುದು ಯಾವುದಕ್ಕೆ ಉದಾಹರಣೆ

1. ಪ್ರತಿಲೋಮನ  2. ಹೈಡ್ರಾಲಿಸಿಸ್

3. ವಿಕೃತಗೊಳ್ಳುವಿಕೆ  4. ಗರಣೆ ಕಟ್ಟುವಿಕೆ

46. ಟಿವಿ ಸಂವಹನದಲ್ಲಿ......... ಇದ್ದರೆ ಒಳ್ಳೆಯದು

1. ಆಂಪ್ಲಿಟ್ಯೂಡ್ ಮಾಡ್ಯೂಲೇಶನ್

2. ಫ್ರೀಕ್ವೆನ್ಸಿ ಮಾಡ್ಯೂಲೇಶನ್

3. ಫೇಸ್ ಮಾಡ್ಯೂಲೇಶನ್

4. ತರಂಗಾಂತರ (ವೇವ್‌ಲೆಂಗ್ಥ್) ಮಾಡ್ಯೂಲೇಶನ್

47. ಕ್ಲೋರೋಫಿಲ್‌ನಲ್ಲಿರುವ ಲೋಹ

1. ಕಬ್ಬಿಣ  2. ತಾಮ್ರ

3. ಮೆಗ್ನೀಶಿಯಂ  4. ಜಿಂಕ್

48. ಜಿಐ ಕೊಳವೆಗಳಲ್ಲಿ ಕಬ್ಬಿಣದ ಸಂಕ್ಷಾರಣವನ್ನು ಈ ಕೆಳಕಂಡ ಲೇಪನದ ಮೂಲಕ ತಡೆಗಟ್ಟಲಾಗುವುದು

1. ಅಲ್ಯೂಮಿನಿಯಂ  2. ಟಿನ್

3. ಜಿಂಕ್  4. ಮೆಗ್ನೀಶಿಯಂ

49. ಮಾಲಿನ್ಯದಿಂದಾಗಿ ನದಿ ನೀರಿನ ಒಂದು ಸ್ಯಾಂಪಲ್ಲು ಆಮ್ಲೀಯವಾಗಿರುವುದು ಕಂಡುಬಂದಿತು. ಅದರ ಪಿ.ಹೆಚ್ ಮೌಲ್ಯ ಎಷ್ಟಿರಬಹುದು?

1. 5.3  2. 7.4

3. 10.5  4. 14.0

50. ರೆಫ್ರಿಜರೇಟರ್ ಯಾವ ತತ್ವದ ಮೇಲೆ ಕೆಲಸ ಮಾಡುತ್ತದೆ?

1. ಉಷ್ಣ ಬಲ ಕ್ರಿಯಾಶಾಸ್ತ್ರದ 1ನೇ ನಿಯಮದಂತೆ

2. ಉಷ್ಣಬಲ ಕ್ರಿಯಾಶಾಸ್ತ್ರದ 2ನೇ ನಿಯಮದಂತೆ

3. ಔಲ್ಸ್‌ನ ನಿಯಮದಂತೆ

4. ಕೂಲಂಬ್‌ನ ನಿಯಮದಂತೆ

51. ಅಪ್ರತಿಮ ಪ್ರತಿಭಾಶಾಲಿ ಗಣಿತಜ್ಞ ಎಸ್. ರಾಮಾನುಜಂ ಅವರು ಸಂಖ್ಯೆಯೊಂದನ್ನು ಕುರಿತು, 'ಇದು ಬಹಳ ಕುತೂಹಲಕಾರಿ ಸಂಖ್ಯೆ. ಇದು ಅತ್ಯಂತ ಚಿಕ್ಕ ಸಂಖ್ಯೆಯಾಗಿದ್ದು ಇದನ್ನು ಎರಡು ಘನಗಳ ಮೊತ್ತವೆಂದು ಎರಡು ವಿಭಿನ್ನ ರೀತಿಗಳಲ್ಲಿ ವ್ಯಕ್ತಪಡಿಸಬಹುದಾಗಿದೆ' ಎಂದು ಹೇಳಿದ್ದಾರೆ ಈ ಪ್ರಸಿದ್ಧ ಸಂಖ್ಯೆ ಯಾವುದು?